## ರಾಜ್ಯಮಟ್ಟದ ಎಸ್.ಎಸ್.ಎಲ್.ಸಿ. ಪೂರ್ವಸಿದ್ಧತಾ ಪರೀಕ್ಷೆ – 2025

**ಸಂಕೇತ ಸಂಖ್ಯೆ : 01-K** **Code No. : 01-K**

# ಮಾದರಿ ಉತ್ತರ ಪತ್ರಿಕೆ

**ವಿಷಯ : ಪ್ರಥಮ ಭಾಷೆ – ಕನ್ನಡ**

SUBJECT : FIRST LANGUAGE – KANNADA

ಗರಿಷ್ಠ ಅಂಕಗಳು : 100 ] [ MAX. MARKS : 100

**ಬಸವರಾಜ ಟಿ.ಎಂ**
**ಕನ್ನಡ ಭಾಷಾ ಶಿಕ್ಷಕರು**
**ಬಾಲಕಿಯರ ಸರ್ಕಾರಿ ಪ್ರೌಢಶಾಲೆ**
**ಹರಪನಹಳ್ಳಿ, ವಿಜಯನಗರ ಜಿಲ್ಲೆ**

# ರಾಜ್ಯಮಟ್ಟದ ಎಸ್.ಎಸ್.ಎಲ್.ಸಿ. ಪೂರ್ವಸಿದ್ಧತಾ ಪರೀಕ್ಷೆ – 2025

**ಸಂಕೇತ ಸಂಖ್ಯೆ : 01-K** **Code No. : 01-K**

**ವಿಷಯ : ಪ್ರಥಮ ಭಾಷೆ – ಕನ್ನಡ**

SUBJECT : FIRST LANGUAGE - KANNADA

ಗರಿಷ್ಠ ಅಂಕಗಳು : 100 ] [ MAX. MARKS : 100

## ಮಾದರಿ ಉತ್ತರ ಪತ್ರಿಕೆ

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 6X 1 = 6

1. ಕನ್ನಡ ವರ್ಣಮಾಲೆಯಲ್ಲಿನ ಸ್ವರಾಕ್ಷರಗಳ ಸಂಖ್ಯೆ

(ಎ) 25 (ಬಿ) 09

(ಸಿ) 05 (ಡಿ) 10

**ಉತ್ತರ : (ಸಿ) 05**

2. **'ಮೈದೋರು'** ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಆದೇಶ ಸಂಧಿ (ಬಿ) ಆಗಮ ಸಂಧಿ

(ಸಿ) ಗುಣ ಸಂಧಿ (ಡಿ) ಯಣ್ ಸಂಧಿ

**ಉತ್ತರ : (ಎ) ಆದೇಶ ಸಂಧಿ**

3. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ

(ಎ) ಪೂರ್ಣವಿರಾಮ (ಬಿ) ವಿವರಣಾತ್ಮಕ

(ಸಿ) ಭಾವಸೂಚಕ (ಡಿ) ಪ್ರಶ್ನಾರ್ಥಕ

**ಉತ್ತರ : (ಬಿ) ವಿವರಣಾತ್ಮಕ**

4. **'ಮೆಲ್ವಾತು'** ಪದವು ಈ ಸಮಾಸಕ್ಕೆ ಸೇರಿದೆ

(ಎ) ತತ್ಪುರುಷ ಸಮಾಸ (ಬಿ) ಅಂಶಿ ಸಮಾಸ

(ಸಿ) ಕ್ರಿಯಾ ಸಮಾಸ (ಡಿ) ಕರ್ಮಧಾರಯ ಸಮಾಸ

**ಉತ್ತರ : (ಡಿ) ಕರ್ಮಧಾರಯ ಸಮಾಸ**

5. **'ಅತ್ತಣಿಂ'** ಎಂಬುದು ಈ ವಿಭಕ್ತಿ ಪ್ರತ್ಯಯ

(ಎ) ಪ್ರಥಮ (ಬಿ) ತೃತೀಯ

(ಸಿ) ಪಂಚಮೀ (ಡಿ) ಸಪ್ತಮೀ

**ಉತ್ತರ : (ಸಿ) ಪಂಚಮೀ**

6. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅದು

(ಎ) ಮಿಶ್ರವಾಕ್ಯ (ಬಿ) ಸಾಮಾನ್ಯ ವಾಕ್ಯ

(ಸಿ) ಸಂಯೋಜಿತ ವಾಕ್ಯ (ಡಿ) ಸಂಯುಕ್ತವಾಕ್ಯ

**ಉತ್ತರ : (ಎ) ಮಿಶ್ರವಾಕ್ಯ**

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** 4 X 1 = 4

7. ಪರ್ವತ : ರೂಢನಾಮ :: ಸಹದೇವ : **ಅಂಕಿತನಾಮ**

8. ಮೊತ್ತಮೊದಲು : ದ್ವಿರುಕ್ತಿ : :: ಸತಿಪತಿ : **ಜೋಡುನುಡಿ**

9. ಕಾರ್ಯ : ಕಜ್ಜ : ಯಶ : **ಜಸ**

10. ಚೆನ್ನಾಗಿ : ಸಾಮಾನ್ಯಾರ್ಥಕಾವ್ಯಯ :: ಅಯ್ಯೋ : **ಭಾವಸೂಚಕಾವ್ಯಯ**

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 7 X 1 = 7

**11. ಭಾಷೆ ಯಾವುದಕ್ಕೆ ಸಾಧನವಾಗಿದೆ ?**

**ಉತ್ತರ :** ನಮ್ಮ ಸುತ್ತಮುತ್ತಲಿನವರೊಡನೆ ವ್ಯವಹರಿಸುವುದಕ್ಕೆ ಹಾಗೂ ವಿಚಾರ ವಿನಿಮಯ ಮಾಡುವುದಕ್ಕೆ ಭಾಷೆ ಒಂದು ಅಮೂಲ್ಯ ಸಾಧನವಾಗಿದೆ.

**12. ವಚನಕಾರರಿಗೆ ಯಾವುದು ದೇವರಾಗಿತ್ತು ?**

**ಉತ್ತರ :** ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು.

**13. ಗಡಿ ಪ್ರದೇಶದಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏಕೆ ಪಾಲಿಸಲಾಗುತ್ತದೆ ?**

**ಉತ್ತರ :** ಗಡಿ ಪ್ರದೇಶದಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು 'ಬ್ಲಾಕ್ ಔಟ್' ನಿಯಮವನ್ನು ಪಾಲಿಸಲಾಗುತ್ತದೆ.

**14. ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಯಾರ ಬಳಿಗೆ ಕಳುಹಿಸಿದಳು ?**

**ಉತ್ತರ :** ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ತನ್ನ ಅಣ್ಣನಾದ ಸೂರ್ಯಮಿತ್ರನ ಬಳಿಗೆ ಕಳುಹಿಸಿದಳು.

**15. ಹಕ್ಕಿಯು ಕಣ್ಣುಗಳು ಯಾವುವು ?**

**ಉತ್ತರ :** ಹಕ್ಕಿಯು ಕಣ್ಣುಗಳು ಸೂರ್ಯ ಚಂದ್ರರು.

**16. ದ್ರೋಣನು ಪರಶುರಾಮರಲ್ಲಿಗೆ ಏಕೆ ಬಂದನು?**

**ಉತ್ತರ :** ದ್ರೋಣನು ಪರಶುರಾಮರಲ್ಲಿಗೆ ದ್ರವ್ಯರ್ಥಿಯಾಗಿ ಬಂದನು.

**17. ಕ್ರಿಯಾ ಸ್ವಾತಂತ್ರ್ಯ ಎಂದರೇನು ?**

**ಉತ್ತರ :** ಕ್ರಿಯಾ ಸ್ವಾತಂತ್ರ್ಯವೆಂದರೆ, ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು.

## IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 X 2 =20

**18. ಕನ್ನಡ ಭಾಷೆ ಹದಗೊಂಡದ್ದು ಹೇಗೆ ?**

**ಉತ್ತರ :** ಅನೇಕ ಕವಿಗಳು ಕನ್ನಡ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಪದಗಳ ಬಳಕೆ ಹೆಚ್ಚಾಗಬೇಕೆಂದು ಸಾರಿದ್ದಾರೆ. ಅಂಥವರ ವಾಣಿಯಿಂದ ಕನ್ನಡದ ವೀಣೆ ಮೃದು ಮಧುರವಾಗಿ ಮಿಡಿಯಿತು. ಮುಂದೆ ಬಸವೇಶ್ವರ, ಅಲ್ಲಮಪ್ರಭುಗಳಂತಹ ಶರಣವರೇಣ್ಯರು, ಚಾಮರಸ, ಕುಮಾರವ್ಯಾಸರಂತಹ ಕವಿಪುಂಗವರು, ಪುರಂದರದಾಸ, ಕನಕದಾಸರಂತಹ ದಾಸ ಶ್ರೇಷ್ಠರು ಸುಲಭ ಮಾರ್ಗವನ್ನೇ ತುಳಿದರು. ತಮ್ಮ ತಮ್ಮ ಅನುಭವಸಾರವನ್ನು ಸುಲಭವೂ ಸುಂದರವೂ ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿವ್ಯಕ್ತಪಡಿಸಿದರು. ಹೀಗೆ ಕನ್ನಡ ಭಾಷೆ ಹದಗೊಂಡಿತು.

**19. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು ? ವಿವರಿಸಿ.**

**ಉತ್ತರ :** ವಚನಕಾರರ ದೃಷ್ಟಿಯಲ್ಲಿ ಅರಿವು ಅಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ. ಅದು ಕ್ರಿಯೆಯ ಅನುಭವದಿಂದ ಒಡಮೂಡಿ ಬರುವುದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ, ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು ಎಂದು ಹೇಳಲಾಗಿದೆ.

**20. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳಾವುವು ?**

ಉತ್ತರ : ಮುದುಕಿಯು ರಾಹಿಲನ ಬಳಿ "ನೋಡಪ್ಪಾ, ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು. ಮದುವೆಯಾಗಿ ನವ ವಧುವಾಗಿ ಈ ಊರನ್ನು ಪ್ರವೇಶಿಸಿದೆ. ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು. ಜಮೀನು ಆಸ್ತಿ ನಮಗೆ ಸಾಕಾಗುವಷ್ಟು ಇತ್ತು. ಈಗಲೂ ಇದೆ. ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ? ಯುದ್ಧವಂತೆ, ಯುದ್ಧ!" ಎಂದು ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳಾಗಿವೆ.

**21. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ?**

**ಉತ್ತರ :** ಲಕ್ಷ್ಮಣನು "ತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ಕಾಂತಿ ಕಳೆದುಕೊಂಡರೆ ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯ ಕಳೆದುಕೊಂಡರೆ ಈ ಲೋಕಕ್ಕೆ ಸ್ಥೈರ್ಯ ನೀಡುವವರು ಯಾರು?" ಎಂದು ಅಣ್ಣನನ್ನು ಸಂತೈಸಿದನು.

**22. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ ?**

**ಉತ್ತರ :** ಕಾಲವು ಯುಗಯುಗಗಳ ಹಣೆಬರೆಹವನ್ನು, ಅಳಿಸಿ ಹಾಕಿ ಹೊಸತನವನ್ನು (ಒಳ್ಳೆತನವನ್ನು) ಹೊಸ ಹಣೆಬರೆಹವನ್ನು ಬರೆದು ಎಲ್ಲರಿಗೂ ಬದಲಾವಣೆಯಾಗುವ ಒಳ್ಳೆಯ ಭಾಗ್ಯವನ್ನು ತೆರೆದು ಕೊಟ್ಟಿದೆ. ಹಾಗೆಯೇ ರೆಕ್ಕೆಯ ಬೀಸುತ, ಮೇಲಕ್ಕೆ ಹಾರುತ, ಹಾರುವ ಈ ಹೊಸಗಾಲದ ಹಸು ಮಕ್ಕಳಿಗೆ ಹೊಸ ಚೇತನವನ್ನು (ಶಕ್ತಿಯನ್ನು) ನೀಡುತ್ತ, ಉತ್ತಮ ಭವಿಷ್ಯಕ್ಕಾಗಿ ಶುಭ ಹರಸಿದೆ.

**23. ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯಗಳನ್ನು ತಿಳಿಸಿ.**

**ಉತ್ತರ :** ತನ್ನ ಪ್ರೀತಿಯ ಗೆಳೆಯ ಕರ್ಣನನ್ನು, ನನ್ನ ಪ್ರೀತಿಯ ತಮ್ಮ ದುಶ್ಯಾಸನನನ್ನು ಕೊಂದವರು ಅರ್ಜುನ–ಭೀಮರು. ಅವರು ಜೀವಂತವಾಗಿರುವವರೆಗೆ ಸಂಧಿಗೆ ಒಪ್ಪಲಾರೆನು. ಮೊದಲು ಆ ಇಬ್ಬರನ್ನು ಕೊಲ್ಲುವೆನು. ಕೊಂದಮೇಲೆ ಪ್ರಸಿದ್ಧನಾದ, ಧರ್ಮರಾಯನೊಡನೆ ಸಂಧಿ ಮಾಡಿಕೊಳ್ಳುತ್ತೇನೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾನೆ.

**24 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?**

**ಉತ್ತರ:** ಒಡೆಯನ ಮನೆಯ ಅಂಗಳದಲ್ಲಿ ಮಾವಿನ ಮರಗಳು (ಹಚ್ಚಹಸುರಾಗಿ) ಮೈ ತುಂಬಿ ನಿಂತವೆ. ಆ ಪ್ರಕೃತಿಯ ಮಡಿಲಲ್ಲಿ ಹಕ್ಕಿಗಳು ರೆಕ್ಕೆ ಬಿಚ್ಚಿ ಹಾರುತ್ತಿವೆ. ಪ್ರಕೃತಿಯ ಸೊಬಗನ್ನು ಕೋಗಿಲೆಗಳು ಮನ ದುಂಬಿ ಹಾಡುತ್ತಿವೆ. ಈ ಭೂಮಿಗೆ ಕಡಲು ಉಕ್ಕಿ ಹರಿಯುವ ಸಂಭ್ರಮ ವ್ಯಕ್ತವಾಗಿದೆ.

**25. ಭಗತ್‌ಸಿಂಗ್ ಜಲಿಯನ್ ವಾಲಾಬಾಗ್ ಮಾರಣಹೋಮದಿಂದ ತೆಗೆದುಕೊಂಡ ನಿರ್ಧಾರವನ್ನು ತಿಳಿಸಿ.**

**ಉತ್ತರ :** ಒಂದಲ್ಲ ಒಂದು ದಿನ ಈ ಬ್ರಿಟಿಷರ ಧಮನಕಾರಿ ಪ್ರಭುತ್ವವನ್ನು ಧ್ವಂಸ ಮಾಡಲು ಏನನ್ನಾದರೂ ಮಾಡಿಯೇ ತೀರುತ್ತೇನೆಂದೂ, ಕ್ರೂರ ಬ್ರಿಟಿಷ್ ಆಳ್ವಿಕೆಯನ್ನು ಅಂತ್ಯಗೊಳಿಸಬೇಕೆಂಬ ನಿರ್ಧಾರವನ್ನು ತೆಗೆದುಕೊಂಡನು.

26. **ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ಹೇಗೆ ವ್ಯಕ್ತಗೊಂಡಿದೆ ?**

**ಉತ್ತರ :** ಚಂದನವನ್ನು ಕಡಿದು, ಕೊರೆದು ತೇದರೂ ಅದು ಸುವಾಸನೆಯನ್ನು ನೀಡದೇ ಇರಲಾರದು. ಚಿನ್ನವನ್ನು ಕಡಿದು, ತಿಕ್ಕಿದರೂ ಬೆಂಕಿಯಲ್ಲಿ ಹಾಕಿ ಕಾಯಿಸಿ ಬಡಿದರೂ, ಅದು ತನ್ನ ಹೊಳಪನ್ನು ಕಳೆದುಕೊಳ್ಳುವುದಿಲ್ಲ, ಕಬ್ಬನ್ನು ಗಿಣ್ಣು ಗಿಣ್ಣಿಗೂ ತುಂಡರಿಸಿದರೂ, ಗಾಣದಲ್ಲಿ ಹಾಕಿ ಅರೆದರೂ, ಬೆಂದು ಪಾನಕವಾಗಿ ಸಕ್ಕರೆಯಾದರೂ ಅದು ತನ್ನ ಸಿಹಿಯನ್ನು ಎಂದಿಗೂ ಕಳೆದುಕೊಳ್ಳುವುದಿಲ್ಲ. ಹಿಂದೆ ಮಾಡಿದ ಪಾಪಕಾರ್ಯಗಳನ್ನು ಭಗವಂತನ ಮುಂದೆ ಇಡದೆ, ಕೊಂದರೂ ನಿನಗೆ ಶರಣು ಎನ್ನುವುದನ್ನು ಬಿಡುವುದಿಲ್ಲ ಎಂದು ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ವ್ಯಕ್ತಗೊಂಡಿದೆ.

27. **ಪೈಗಳ ತಮ್ಮನ ನೂಲುಮದುವೆಗೆ ಹೇಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರು ?**

**ಉತ್ತರ** : ಪೈಗಳ ತಮ್ಮನ ನೂಲುಮದುವೆಯ ದಿನ ಅಂಗಳದಲ್ಲಿ ಒಂದು ಕಡೆಯಲ್ಲಿ ಲಡ್ಡುಗೆಗಳನ್ನು ಕಟ್ಟುತ್ತಿದ್ದರು, ಮತ್ತೊಂದು ಕಡೆ ಮಂಡಿಗೆಗಳನ್ನು ಮಡುಚುತ್ತಿದ್ದರು, ಬೇರೊಂದು ಕಡೆ ಸೇವಿಗೆಯನ್ನು ಒತ್ತುತ್ತಿದ್ದರು ಹೀಗೆ ಇನ್ನೂ ಮುಂತಾದ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದರು.

**V. ಕೆಳಗಿನ ಕವಿಗಳ ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು , ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ :** 2 x 3 = 6

**28.** **ಪು.ತಿ.ನರಸಿಂಹಾಚಾರ್**

**ಉತ್ತರ :** ಪು.ತಿ.ನ. ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ ಇವರು **ಕ್ರಿ.ಶ. 1905**ರಲ್ಲಿ **ಮಂಡ್ಯ ಜಿಲ್ಲೆಯ ಮೇಲುಕೋಟೆ** ಎಂಬ ಊರಿನಲ್ಲಿ ಜನಿಸಿದ್ದಾರೆ.

ಇವರು **'ಶಬರಿ', 'ಅಹಲ್ಯೆ', 'ಗೋಕುಲ ನಿರ್ಗಮನ', 'ವಿಕಟಕವಿವಿಜಯ', 'ಹಂಸದಮಯಂತಿ ಮತ್ತು ಇತರ ರೂಪಕಗಳು', 'ಹಣತೆ', 'ರಸಸರಸ್ವತಿ', 'ಗಣೇಶದರ್ಶನ', 'ಶಾರದಯಾಮಿನಿ', 'ಶ್ರೀಹರಿಚರಿತೆ', 'ರಥಸಪ್ತಮಿ'** ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಇವರ **'ಹಂಸದಮಯಂತಿ ಮತ್ತು ಇತರ ರೂಪಕಗಳು'** ಕೃತಿಗೆ **'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ'** ಹಾಗೂ **'ಶ್ರೀಹರಿಚರಿತೆ'** ಕಾವ್ಯಕ್ಕೆ **'ಪಂಪ ಪ್ರಶಸ್ತಿ'** ಗಳನ್ನು ಪಡೆದಿದ್ದಾರೆ.

**29.** ರನ್ನ

**ಉತ್ತರ :** ಕನ್ನಡದ ರತ್ನತ್ರಯರಲ್ಲಿ ಒಬ್ಬನಾದ ರನ್ನನು **ಕ್ರಿ. ಶ. ಸು. 949** ರಲ್ಲಿ ಬಾಗಲಕೋಟೆ ಜಿಲ್ಲೆಯ **ಮುದುವೊಳಲು** ಎಂಬ ಗ್ರಾಮದಲ್ಲಿ ಜನಿಸಿದನು. ತಂದೆ ಜಿನವಲ್ಲಭ, ತಾಯಿ ಅಬ್ಬಲಬ್ಬೆ.

ಈತನು **'ಸಾಹಸ ಭೀಮ ವಿಜಯಂ (ಗದಾಯುದ್ಧ)', 'ಅಜಿತ ತೀರ್ಥಂಕರ ಪುರಾಣ ತಿಲಕಂ', 'ಪರಶುರಾಮ ಚರಿತಂ', 'ಚಕ್ರೇಶ್ವರ ಚರಿತಂ'** ಎಂಬ ಕಾವ್ಯಗಳನ್ನು ಬರೆದಿದ್ದಾನೆ. **'ರನ್ನಕಂದ'** ಎಂಬ ನಿಘಂಟನ್ನು ಬರೆದಿರುವುದಾಗಿ ತಿಳಿದು ಬರುತ್ತದೆ.

ರನ್ನನು ಚಾಲುಕ್ಯ ದೊರೆ ತೈಲಪನ ಆಸ್ಥಾನದಲ್ಲಿದ್ದು ಆತನಿಂದ **'ಕವಿಚಕ್ರವರ್ತಿ'** ಎಂಬ ಬಿರುದನ್ನು ಪಡೆದಿದ್ದಾನೆ.

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :**

**30. ಒಡೆವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ** 1 x 3 = 3

**ಉತ್ತರ :**

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ∪∪∪ | ∪ –∪ | –∪∪ | ∪–∪ | ∪ – ∪ | ∪–∪ | – ∪ – |
| ಒಡೆವೆ | ಯನರ್ಥಿ | ಗಿತ್ತೆನ | ವನೀತ | ಳಮಂಗು | ರುಗಿತ್ತೆ | ನೀಗಳೊಂ |

**ಛಂದಸ್ಸು–** ಈ ಮೇಲಿನ ಪದ್ಯವು **'ಚಂಪಕಮಾಲಾ ವೃತ್ತ'**ದ ಲಕ್ಷ್ಯವಾಗಿದೆ.

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** 1 x 3 = 3

**31. "ವಸಂತಮಾಸದಲ್ಲಿ ಹೂ ಬಿಟ್ಟ ಮರಗಿಡಗಳು ಮದುವಣಗಿತ್ತಿಯಂತೆ ಶೋಭಿಸುತ್ತಿದ್ದವು"**

**ಉತ್ತರ :**

**ಅಲಂಕಾರ :– ಉಪಮಾಲಂಕಾರ**

**ಉಪಮೇಯ :–** ವಸಂತಮಾಸದಲ್ಲಿ ಹೂ ಬಿಟ್ಟ ಮರಗಿಡಗಳು

**ಉಪಮಾನ :–** ಮದುವಣಗಿತ್ತಿ

**ಉಪಮಾ ವಾಚಕ :–** ಅಂತೆ

**ಸಮಾನ ಧರ್ಮ :–** ಶೋಭಿಸುವುದು

**ಸಮನ್ವಯ:–** ಇಲ್ಲಿ ಉಪಮೇಯವಾದ 'ವಸಂತಮಾಸದಲ್ಲಿ ಹೂ ಬಿಟ್ಟ ಮರಗಿಡಗಳನ್ನು ಉಪಮಾನವಾದ ಮದುವಣಗಿತ್ತಿಗೆ ಪರಸ್ಪರ ಸುಂದರವಾಗಿ ಹೋಲಿಸಿ ವರ್ಣಿಸಲಾಗಿದೆ. 'ಅಂತೆ' ಎಂಬ ಉಪಮಾವಾಚಕವಿದ್ದು, 'ಶೋಭಿಸುವುದು' ಎಂಬ ಸಮಾನಧರ್ಮ ಇರುವುದರಿಂದ ಇದು ಉಪಮಾಲಂಕಾರದ ಲಕ್ಷ್ಯವಾಗಿದೆ.

**ಲಕ್ಷಣ:–** ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು **ಉಪಮಾಲಂಕಾರ.**

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ :**

**32. ಹೆತ್ತ ತಾಯಿ; ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.** 1 x 3 = 3

**ಉತ್ತರ :**

ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮ ನಂತೆ. **ಹೆತ್ತ ತಾಯಿ; ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

**'ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ'** ಇದು ವಾಲ್ಮೀಕಿ ರಾಮಾಯಣದಲ್ಲಿ ಬರುವ ಒಂದು ಮಾತು. ಇದರ ಅನುವಾದವೇ ಮೇಲಿನ ಹೇಳಿಕೆ. ಇದರಲ್ಲಿ ತಾಯಿ ಮತ್ತು ನಾಡಿನ ಮಹತ್ವ ಅಡಗಿದೆ. ಹೆತ್ತ ತಾಯಿ ಹೊತ್ತ ನಾಡು ಎರಡು ಒಂದೇ. ನಮ್ಮನ್ನು ಹೆತ್ತು ಹೊತ್ತು ಸಾಕಿ ಸಲುಹಿದ ತಾಯಿಯ ಮಡಿಲು ಸ್ವರ್ಗಕ್ಕಿಂತಲೂ ಮಿಗಿಲಾದ ಸುಖವನ್ನು ನೀಡುತ್ತದೆ ಎನ್ನುವುದು ಅನುಭವಿಗಳ ಹೇಳಿಕೆ. ಅಂತೆಯೇ ಹೊತ್ತ ನಾಡು ನಮ್ಮನ್ನು ಜೀವನ ಪೂರ್ತಿ ತನ್ನ ಮಡಿಲಲ್ಲಿಟ್ಟು ಪೋಷಿಸುತ್ತದೆ. ನಮ್ಮ ಜೀವನಕ್ಕೆ ಅಗತ್ಯವಾದಂತಹ ಅನ್ನ, ನೀರು, ಬಟ್ಟೆ, ವಸತಿ, ಹಾಗೂ ಇನ್ನಿತರ ಎಲ್ಲಾ ಅವಶ್ಯಕತೆಗಳನ್ನು ಪೂರೈಸುವಂತಹ ಜನ್ಮ ಭೂಮಿಯನ್ನು ತಾಯಿಗೆ ಹೋಲಿಸಿರುವುದು ಶ್ರೇಷ್ಠವಾಗಿದೆ.

ಮಕ್ಕಳ ಪಾಲನೆಗಾಗಿ ತಾಯಿ ತನ್ನ ಸುಖವನ್ನೆಲ್ಲ ಮರೆತು ಆಹಾರ ನಿದ್ರೆಗಳನ್ನು ತೊರೆದು ಮಗುವಿನ ಲಾಲನೆ ಪೋಷಣೆಗಳಲ್ಲಿಯೇ ಸುಖವನ್ನು ಕಾಣುತ್ತಾಳೆ. ತಾಯಿಯಂತೆಯೇ ನಾವು ಹುಟ್ಟಿದ ನಾಡು ಕೂಡ. ಆ ನೆಲದಲ್ಲಿ ಆಡುತ್ತೇವೆ, ಅಗೆಯುತ್ತೇವೆ. ಬೆಳೆಯನ್ನು ಬೆಳೆಯುತ್ತೇವೆ, ಬೆಳೆದುದನ್ನು ತಿಂದು ಬದುಕುತ್ತೇವೆ. ತಾಯಿಯಂತೆ ನಾಡು ನಮ್ಮನ್ನು ಪೋಷಿಸುತ್ತದೆ. ಅದ್ದರಿಂದ ಜನ್ಮಭೂಮಿಯನ್ನು ಮರೆತವರು ತಾಯಿಯನ್ನು ಮರೆತಂತೆಯೇ ಸರಿ. ಆದುದರಿಂದ ಹೆತ್ತತಾಯಿ ಹೊತ್ತನಾಡಿನ ಋಣವನ್ನು ಮರೆಯದೇ ಅವರ ಹಿರಿಮೆಯನ್ನು ಎತ್ತಿಹಿಡಿಯಬೇಕಾದದ್ದು ಪ್ರತಿಯೊಬ್ಬನ ಆದ್ಯ ಕರ್ತವ್ಯವಾಗಿದೆ ಎಂಬುದನ್ನು ಈ ಗಾದೆ ಮಾತು ಅರ್ಥೈಸುತ್ತದೆ.

**ಅಥವಾ**

**ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ.**

**ಉತ್ತರ :**

ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿ ಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ **"ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ"** ಎಂಬ ಗಾದೆಯು ಪ್ರಸಿದ್ಧವಾಗಿದೆ.

ಬೆಟ್ಟವನ್ನು ದೂರದಿಂದ ನೋಡಿದಾಗ ಅಲ್ಲಿರುವ ಕಲ್ಲು ಮುಳ್ಳುಗಳಾಗಲೀ ಏರು ತಗ್ಗುಗಳಾಗಲೀ ಓರೆ ಕೋರೆಗಳಾಗಲಿ ಯಾವುದೂ ನಮ್ಮ ಗಮನಕ್ಕೆ ಬರಲಾರದು. ಎಲ್ಲವೂ ಏಕರೀತಿಯಾಗಿ ದೂರದಿಂದ ಕಾಣುವ ಅದರ ಸೌಂದರ್ಯ ಮಾತ್ರ ನಮ್ಮ ಗಮನವನ್ನು ಸೆಳೆಯುತ್ತದೆ. ದೂರದಿಂದ ವರ್ಣರಂಜಿತವಾಗಿ, ನುಣುಪಾಗಿ, ಆಕರ್ಷಕವಾಗಿ ಕಾಣುವ ಬೆಟ್ಟವು ತನ್ನೊಳಗೆ ಕಲ್ಲು ಮುಳ್ಳುಗಳನ್ನು, ಬಂಡೆಗಳನ್ನು ಹೊಂದಿರುತ್ತದೆ. ಬೆಟ್ಟದ ದೂರದ ಸೌಂದರ್ಯಕ್ಕೆ ಮರುಳಾಗಿ ಹತ್ತಿರ ಹೋಗಿ ನೋಡಿದಾಗ ಅಲ್ಲಿರುವ ಬೆಟ್ಟದ ನಿಜವಾದ ಚಿತ್ರಣವು ನಮ್ಮಲ್ಲಿ ನಿರಾಸೆಯನ್ನು, ಅಲ್ಲಿನ ಕಲ್ಲುಮುಳ್ಳುಗಳಲ್ಲಿ ನಡೆದಾಡುವಾಗ ಆಗುವ ಸಮಸ್ಯೆಯನ್ನು, ಏರು ತಗ್ಗುಗಳು ಎದುರಾದಾಗ ನಡೆದಾಡಬೇಕಾದ ಎಚ್ಚರಿಕೆಯನ್ನು ಸೂಚಿಸಿ ದೂರದಿಂದ ನೋಡಿ ತೀರ್ಮಾನಿಸಿದುದರ ಬಗ್ಗೆ ನಮಗೆ ಇದು ನಿಜವಲ್ಲ ಎಂದು ಅರಿವಾಗುತ್ತದೆ.

ಅಂತೆಯೇ ಜೀವನದಲ್ಲಿ ನಮಗೆ ಬೇರೆ ಬೇರೆ ಮನೋಭಾವದ ಜನರು ಪರಿಚಿತರಾಗಬಹುದು. ಅವರ ಬಾಹ್ಯವಾದ ಸೌಂದರ್ಯಕ್ಕೆ ಮರುಳಾಗಿ ಗೆಳೆತನ ಮಾಡಬಾರದು ಅಥವಾ ಹೊರನೋಟದಿಂದ ಮಾತ್ರವೇ ವ್ಯಕ್ತಿಯನ್ನು ಅಳೆಯಲಾಗದು. ಅವರೊಂದಿಗಿನ ಒಡನಾಟದಿಂದ ಹಲವು ದಿನಗಳ ಪರಿಚಯಾತ್ಮಕ ಅಧ್ಯಯನದಿಂದ ಮಾತ್ರ ಅವರು ಹೇಗೆ ಎಂದು ಹೇಳಲು ಸಾಧ್ಯ. ಬೆಟ್ಟದ ನಿಜವಾದ ಸೌಂದರ್ಯ ಬೆಟ್ಟದ ಹತ್ತಿರ ಹೋಗಿ ನೋಡಿದಾಗ ಮಾತ್ರವೇ ಗೊತ್ತಾದಂತೆ ಯಾರನ್ನೇ ಆಗಲಿ ಒಮ್ಮೆ ನೋಡಿ ತೀರ್ಮಾನಕ್ಕೆ ಬರದೇ ಅಧ್ಯಯನದಿಂದ ಮಾತ್ರವೇ ಅವರ ಕುರಿತು ತೀರ್ಮಾನಿಸಬೇಕು. ಇದು ಕೇವಲ ವ್ಯಕ್ತಿಗಳ ಸ್ನೇಹ ವಿಚಾರಕ್ಕೆ ಅಷ್ಟೇ ಸೀಮಿತವಾಗಿರದೇ ನಾವು ಯೋಚಿಸದೆ ತೆಗೆದುಕೊಳ್ಳುವ ತೀರ್ಮಾನಕ್ಕೂ ಅನ್ವಯವಾಗುತ್ತದೆ ಎಂದು ಹೇಳಬಹುದು.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :** 6 x 3 = 18

**33. "ನಾನು ಮುಖ ಮೇಲಾಗಿ ಬಿದ್ದಿದ್ದೆನೆ?"**

**ಆಯ್ಕೆ:** ಈ ವಾಕ್ಯವನ್ನು **'ಎ. ಎನ್. ಮೂರ್ತಿರಾವ್'** ಅವರ **'ಸಮಗ್ರ ಲಲಿತ ಪ್ರಬಂಧಗಳು'** ಎಂಬ ಸಂಕಲನದಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಈ ಮಾತನ್ನು ಶಾನುಭೋಗರು ಗಾಡಿಯವರಿಗೆ ಕೇಳಿದರು. ಶಾನುಭೋಗರು ಪ್ರಜ್ಞೆತಪ್ಪಿ ಬಿದ್ದಿದ್ದಾಗ ಅದೇ ದಾರಿಯಲ್ಲಿ ಗಾಡಿಯಲ್ಲಿ ಹೋಗುತ್ತಿದ್ದ ರೈತರು ಅವರ ಮುಖದ ಮೇಲೆ ನೀರೆರೆಚಿ ಎಚ್ಚರಿಸಿದ ಸಂದರ್ಭದಲ್ಲಿ ಅವರ ಮನಸ್ಸನ್ನೆಲ್ಲಾ ವಿಸ್ಮಯ ಆವರಿಸಿತ್ತು. ತಾವು ಉಳಿದದ್ದು ಹೇಗೆ? ನಿಸ್ಸಹಾಯರಾಗಿ ಪ್ರಜ್ಞೆಯಿಲ್ಲದೆ ಬಿದ್ದಿದ್ದಾಗ ಹುಲಿ ತಮ್ಮನ್ನು ಎಳೆದುಕೊಂಡು ಹೋಗಲಿಲ್ಲವೇಕೆ? ಎಂದು ಸ್ವಲ್ಪ ಹೊತ್ತು ಯೋಚಿಸಿ ಗಾಡಿಯವರನ್ನು **"ನಾನು ಮುಖ ಮೇಲಾಗಿ ಬಿದ್ದಿದ್ದೆನೆ?"** ಎಂದು ಕೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ :** ನಾನು ಪ್ರಜ್ಞೆ ತಪ್ಪಿ ಬಿದ್ದಿದ್ದಾಗ ಹುಲಿಯು ಏಕೆ ಎಳೆದುಕೊಂಡು ಹೋಗಲಿಲ್ಲ ಎಂಬ ಸಮಸ್ಯೆಗೆ ಶಾನುಭೋಗರು ಕೊನೆಯವರೆಗೂ ಆ ಪ್ರಾಣಿ ತನ್ನ ಕುಲಧರ್ಮವನ್ನು ಪಾಲಿಸಿಕೊಂಡೇ ಬಂದಿದೆ ಎಂಬ ಉತ್ತರ ಕಂಡುಕೊಳ್ಳುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

34. **"ಮನುಷ್ಯನಂತೆ ಟೊಪ್ಪಿಗೆಯಲ್ಲವೆ ?**

**ಆಯ್ಕೆ:** ಈ ವಾಕ್ಯವನ್ನು **'ವಿ.ಕೃ.ಗೋಕಾಕ್'** ಅವರು ರಚಿಸಿರುವ **'ಸಮುದ್ರದಾಚೆಯಿಂದ'** ಎಂಬ ಪ್ರವಾಸ ಕಥನದಿಂದ ಆಯ್ದ **'ಲಂಡನ್ ನಗರ'** ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ :** ಲೇಖಕರು ಲಂಡನ್ ನಗರಕ್ಕೆ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಪೇಟೆಯನ್ನು ಸುತ್ತಾಡುತ್ತ ಅಲ್ಲಿನ ಹೆಣ್ಣು ಮಕ್ಕಳು ಧರಿಸುತ್ತಿದ್ದ ಟೊಪ್ಪಿಗೆಯ ಬಗ್ಗೆ ವೀಕ್ಷಿಸುವಾಗ ಈ ಮಾತನ್ನು ಉಲ್ಲೇಖಿಸಿದ್ದಾರೆ. ಇಲ್ಲಿಯ ಹೆಣ್ಣುಮಕ್ಕಳ ಟೊಪ್ಪಿಗೆಯನ್ನು ಕುತೂಹಲದಿಂದ ನೋಡಿದೆ. ಆ ಟೊಪ್ಪಿಗೆಗಳ ವಿಶೇಷತೆ ಏನೆಂದರೆ ಒಂದು ಟೊಪ್ಪಿಗೆಯಂತೆ ಇನ್ನೊಂದಿರುವುದಿಲ್ಲ. ಸಿಕ್ಕಿಸಿದ ಪುಚ್ಚವಾದರೂ ಕನಿಷ್ಟಪಕ್ಷ ಬೇರೆಯಾಗಿರುತ್ತದೆ. ಕೋಟ್ಯಾವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು ಮನಗಾಣಬಹುದು. ಮನುಷ್ಯನಂತೆ ಟೊಪ್ಪಿಗೆಯಲ್ಲವೆ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ ಎಂದು ಬರೆದಿದ್ದಾರೆ.

**ಸ್ವಾರಸ್ಯ :** ಲಂಡನ್ ನಗರದಲ್ಲಿ ಹೆಣ್ಣುಮಕ್ಕಳು ಟೊಪ್ಪಿಗೆಯನ್ನು ತಮ್ಮ ವಿಶೇಷವಾದ ಉಡುಪಾಗಿ ಧರಿಸುತ್ತಿದ್ದರು ಎಂಬ ವಿಚಾರದ ಜೊತೆಗೆ ಮನುಷ್ಯರಂತೆ ಟೊಪ್ಪಿಗೆಗಳು ವೈವಿಧ್ಯಮಯವಾಗಿವೆ ಎನ್ನುವುದನ್ನು ಲೇಖಕರು ಗಮನಿಸಿರುವುದು ಸ್ವಾರಸ್ಯವಾಗಿದೆ.

35. **"ಪಸರಂಗೊಟ್ಟೆನಿಲ್ಲಿದರ್ಕ್ಕೆ ಮುಳಿಯದಿರಿಂ"**

**ಆಯ್ಕೆ :** ಈ ವಾಕ್ಯವನ್ನು **'ಶಿವಕೋಟ್ಯಾಚಾರ್ಯ'** ವಿರಚಿತ **'ವಡ್ಡಾರಾಧನೆ'** ಎಂಬ ಕೃತಿಯಿಂದ ಆಯ್ದ **'ಅಗ್ನಿಭೂತಿ ಮತ್ತು ವಾಯುಭೂತಿಯರ ಕಥೆ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಈ ಮಾತನ್ನು ಸೂರ್ಯಮಿತ್ರನು ಅಗ್ನಿಭೂತಿ ಮತ್ತು ವಾಯುಭೂತಿಯರಿಗೆ ಹೇಳಿದನು. ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ ವಿದ್ಯೆಯನ್ನು ಕಲಿಸಿ ಪಂಡಿತರನ್ನಾಗಿ ಮಾಡಿ ಬೀಳ್ಕೊಡುವಾಗ "ನೀವು ನನ್ನ ತಂಗಿಯ ಮಕ್ಕಳೇ. ನೀವು ನನ್ನ ಸೋದರಳಿಯಂದಿರು. ನಿಮಗೆ ನಾನು ಸಲುಗೆ ಕೊಡಲಿಲ್ಲ. ಏಕೆಂದರೆ ನೀವು ಹಿಂದಿನಂತೆ ತಂದೆಯ ಬಳಿಯಿದ್ದಂತೆ ದರ್ಪದಿಂದ ಕೆಟ್ಟಂತೆ ಇಲ್ಲಿಯೂ ಗರ್ವದಿಂದ ಕೆಡುವಿರಿ ಎಂದು ನಾನು ನಿಮ್ಮನ್ನು ಯೋಗ್ಯರನ್ನಾಗಿ ಮಾಡುವ ಕಾರಣದಿಂದ ಸಲುಗೆಯನ್ನು ಕೊಡಲಿಲ್ಲ. ಇದಕ್ಕೆ ಸಿಟ್ಟಾಗದೆ ಇರಿ. ನನ್ನನ್ನು ಕ್ಷಮಿಸಿಬಿಡಿ" ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ :** ಸಲುಗೆಯನ್ನು ಕೊಡದೆ ವಿದ್ಯೆಯನ್ನು ಕಲಿಸಿ ಪಂಡಿತರನ್ನಾಗಿ ಮಾಡಿದ ಸೂರ್ಯಮಿತ್ರನು ತನ್ನ ಅಳಿಯಂದಿರ ಬಳಿ ಕ್ಷಮೆ ಕೇಳುವ ಔಚಿತ್ಯ ಸ್ವಾರಸ್ಯಕರವಾಗಿದೆ.

36. **"ಹಸುರಾಗಸ; ಹಸುರು ಮುಗಿಲು"**

**ಆಯ್ಕೆ:** ಈ ವಾಕ್ಯವನ್ನು **ಕುವೆಂಪು** ಅವರ **'ಪಕ್ಷಿಕಾಶಿ'** ಕವನ ಸಂಕಲನದಿಂದ ಆಯ್ದ **'ಹಸುರು'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ :** ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಕವಿ ಕುವೆಂಪುರವರು ಹಸುರಿನಲ್ಲಿ ತಲ್ಲೀನರಾಗಿರುವುದನ್ನು ಈ ಸಾಲಿನ ಮುಖಾಂತರ ಗುರುತಿಸಬಹುದಾಗಿದೆ. ಹಸುರಾಗಿರುವ ಆಕಾಶ, ಹಸುರಿನ ಮುಗಿಲು, ಹಚ್ಚಹಸುರು ಗದ್ದೆಯ ಬಯಲು, ಹಸುರಿನಿಂದ ಕಂಗೊಳಿಸುವ

ಬೆಟ್ಟಗಳು, ಹಸುರಾಗಿರುವ ಕಣಿವೆಗಳು, ಸಂಜೆಯ ಬಿಸಿಲೂ ಕೂಡ ಹಸುರಾಗಿ ಕಂಗೊಳಿಸುತಿದೆ ಎಂದು ಕವಿ ಅಭಿವ್ಯಕ್ತಪಡಿಸಿದ್ದಾರೆ.

**ಸ್ವಾರಸ್ಯ :** ಕುವೆಂಪು ಅವರ 'ಪ್ರಕೃತಿ ತನ್ಮಯತೆಗೂ', 'ಕವಿ ಮತ್ತು ಪ್ರಕೃತಿ ಒಂದಾಗುವ ಅವರ ಕಾವ್ಯದ ಅದ್ವೈತ ಸ್ಥಿತಿಗೂ' ಸಮರ್ಥ ನಿದರ್ಶನವಾಗಿರುವುದು ಸ್ವಾರಸ್ಯಭರಿತವಾಗಿದೆ.

37. **"ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ"**

**ಆಯ್ಕೆ :–** ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿ ಬೇಡರು'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:–** ಕುಂಪಣಿ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷ್‌ರ ದಂಡು ಹಲಗಲಿಗೆ ಬಂದಿತು. ಬ್ರಿಟಿಷ್ ದಂಡಿನ ಸಿಪಾಯಿಗಳು ಹಲಗಲಿಯ ಬೇಡರನ್ನು ಬೆನ್ನು ಬೆನ್ನು ಹತ್ತಿ ತಿರುತಿರವಿ ಹಾಕಿ ಕೊಂದರು. ಬೇಡರನ್ನು ದಂಡಿನ ಮಧ್ಯೆ ಹಾಕಿಕೊಂಡು **ಕರುಣೆ ಇಲ್ಲದೆ ಹಾಗೆ ಗುಂಡು ಹೊಡೆದು** ಸಾಯಿಸಿದರು ಎಂದು ಲಾವಣಿಕಾರ ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:–** ಹಲಗಲಿಯ ಬೇಡರ ಮೇಲೆ ಗುಂಡು ಹಾರಿಸಿ ಕೊಲ್ಲುವ ಬ್ರಿಟಿಷ್ ಸೈನಿಕರ ನಿಷ್ಕರುಣಾ ಭಾವ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿತವಾಗಿದೆ.

38." **ನೂಕಂತಪ್ಪನನಱಿಯೆನೆಂದು ಸಭೆಯೊಳ್ ನುಡಿದಂ"**

**ಆಯ್ಕೆ :** ಈ ವಾಕ್ಯವನ್ನು **'ಮಹಾಕವಿ ಪಂಪ'** ಬರೆದ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಕೆಮ್ಮನೆ ಮೀಸೆವೊತ್ತೆನೇ'** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಈ ಮಾತನ್ನು ದ್ರುಪದನು ಪಡಿಯಱನಿಗೆ ಹೇಳಿದನು. ತನ್ನ ಒಡನಾಡಿಯೂ ಗೆಳೆಯನೂ ಆದ ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾನೆ ಎಂದು ಕೇಳಿ, ದ್ರೋಣನು ಆ ಪಟ್ಟಣಕ್ಕೆ ಬಂದು ದ್ರುಪದನ ಅರಮನೆಯ ಬಾಗಿಲಿನಲ್ಲಿ ನಿಂತು, ದ್ವಾರಪಾಲಕನನ್ನು ಕರೆದು"ನಿಮ್ಮ ಗೆಳೆಯನಾದ ದ್ರೋಣ ಎಂಬ ಬ್ರಾಹ್ಮಣನು ಬಂದಿದ್ದಾನೆ ಎಂದು ನಿಮ್ಮ ರಾಜನಿಗೆ ತಿಳಿಯಪಡಿಸು" ಎಂದು ಹೇಳಲು, ದ್ವಾರಪಾಲಕನು ಈ ವಿಷಯವನ್ನು ದ್ರುಪನಿಗೆ ಹೇಳಿದಾಗ, ದ್ರುಪದನು ದ್ವಾರಪಾಲಕನೊಡನೆ "ಹಾಗೆ ಹೇಳುತ್ತಿರುವ ಅವನು ಯಾರು? ಇದು ಹಿರಿದಾದ ಭ್ರಮೆಯಲ್ಲವೇ? ದ್ರೋಣ ಎಂಬುವವನು ಬ್ರಾಹ್ಮಣನೇ? ಅವನು ನನಗೆ ಹೇಗೆ ಗೆಳೆಯನು? ಅಂತಹವನನ್ನು ನಾನು ತಿಳಿಯೆನು. ಅವನನ್ನು ಹೊರಗೆ ನೂಕು" ಎಂದು ಸಭಾಮಧ್ಯದಲ್ಲಿ ಕೆಟ್ಟದಾಗಿ ಮಾತನಾಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ದ್ರುಪದನು ರಾಜಪದವಿಯ ಅಹಂಕಾರದಿಂದ, ಮದದಿಂದ ಬಾಲ್ಯದ ಸ್ನೇಹವನ್ನು ಮರೆಯುವುದು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 X 4=4

39. **ಕಲುಷಿತವಾದೀ** ನದೀ ಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರವೀ ಕಾಡು ಮೇಡುಗಳ
ವಸಂತವಾಗುತ **ಮುಟ್ಟೋಣ**

**ಅಥವಾ**

**ಮತಗಳೆಲ್ಲವೂ** ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು **ಬಿತ್ತೋಣ.**

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** 1 X 4 = 4

40. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।
ನೊರ್ವನೇ ವೀರನಾತನ ಯಜ್ಞತುರಗಮಿದು ।
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ।
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು ॥ 3

**ಸಾರಾಂಶ : "ಹುಟ್ಟುಗುಣ ಗಟ್ಟಹತ್ತಿದರೂ ಹೋಗದು"** ಎಂಬುದು ನಾಣ್ನುಡಿ. ಪ್ರತಿಯೊಂದು ಜೀವಿಯೂ ಹುಟ್ಟಿನಿಂದಲೇ ಕೆಲವೊಂದು ಗುಣಗಳನ್ನು ಪಡೆದಿರುತ್ತದೆ. ಇದಕ್ಕೆ ಅದರ ವಂಶವಾಹಿನಿ ಕಾರಣವಾಗಿರುತ್ತದೆ. ಕ್ಷತ್ರಿಯ ಕುಮಾರನಾದ ಲವ ಹುಟ್ಟಿದ್ದು ಋಷ್ಯಾಶ್ರಮದಲ್ಲಿ, ಬೆಳೆದದ್ದು ಋಷಿಕುಮಾರರ ಜೊತೆಗೆ. ಆದರೂ ಅವನ ದೇಹದಲ್ಲಿ ಹರಿಯುತ್ತಿರುವುದು ಕ್ಷತ್ರಿಯ ಗುಣವುಳ್ಳರಕ್ತ. ಹೀಗಾಗಿ ಆಶ್ರಮಕ್ಕೆ ಬಂದ ಕುದುರೆಯ ಹಣೆಯಲ್ಲಿದ್ದ ಲೇಖನದ ಒಕ್ಕಣೆ ಓದಿಕ್ಷತ್ರಿಯ ಸಹಜಗುಣ ಅವನಲ್ಲಿ ಉದ್ದೀಪನಗೊಂಡ ಸನ್ನಿವೇಶವನ್ನು ಇಲ್ಲಿ ಕಾಣಬಹುದು.

"ಭೂಮಂಡಲದಲ್ಲಿ ಕೌಸಲ್ಯ ಪಡೆದ ಕುಮಾರ ಶ್ರೀರಾಮನೊಬ್ಬನೇ ವೀರನು, ಆತನ ಯಜ್ಞದ ಕುದುರೆ ಇದು. ನಿರ್ವಹಿಸಲು ಸಮರ್ಥರಾದವರು ಯಾರಾದರೂ ಇದ್ದರೆ ತಡೆಯಲಿ" ಎಂದು ಇದ್ದ ಲೇಖನವನ್ನು ಓದಿ, ಇವನ ಅಹಂಕಾರವನ್ನು ಬಿಡಿಸದೆ ಇದ್ದರೆ ನನ್ನ ತಾಯಿಯನ್ನು ಎಲ್ಲಾ ಜನರೂ ಬಂಜೆ ಎನ್ನದೆ ಇರುವರೇ, ತನಗೆ ಇರುವ ಈ ತೋಳುಗಳು ಏತಕ್ಕೆ ಬೇಕು ಎಂದು ಪ್ರತಿಜ್ಞೆಯನ್ನು ಕೈಗೊಂಡು ಲವನು ಉರಿದೆದ್ದನು(ಆಕ್ರೋಶಗೊಂಡನು).

**ಮೌಲ್ಯ :** ಈ ಪದ್ಯಭಾಗದಲ್ಲಿ ಶ್ರೀರಾಮನ ವೀರತನ, ಲವನು ತನ್ನ ತಾಯಿ ವೀರಜನನಿ ಎಂಬ ಮಾತೃಪ್ರೇಮವನ್ನು ಮತ್ತು ತನ್ನ ವೀರತ್ವವನ್ನು ಪ್ರದರ್ಶಿಸುವ ಪ್ರತಿಜ್ಞೆಯನ್ನು ಕೈಗೊಂಡಿದ್ದು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 X 4 = 8

**41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು ? ವಿವರಿಸಿ**

**ಉತ್ತರ :** ನಾಲ್ವಡಿ ಕೃಷ್ಣರಾಜ ಒಡೆಯರು 1902 ರಲ್ಲಿ ಮೈಸೂರು ರಾಜ್ಯದ ನೇರ ಉಸ್ತುವಾರಿ ವಹಿಸಿಕೊಂಡರು. ಆಗ ದಿವಾನರಾಗಿದ್ದ ಸರ್. ಕೆ. ಶೇಷಾದ್ರಿ ಅಯ್ಯರ್‌ರವರ ಸಹಕಾರದೊಡನೆ ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾದರು. 1923ರಲ್ಲಿ ಹೊಸ ಕಾನೂನೊಂದನ್ನು ಜಾರಿಗೆ ತಂದು ಪ್ರಜಾಪ್ರತಿನಿಧಿ ಸಭೆಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು.

1907 ರಲ್ಲಿ ನ್ಯಾಯ ವಿಧಾಯಕ ಸಭೆಯನ್ನೂ ಸಹ ಸ್ಥಾಪಿಸಿದರು. ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲ ವಿಷಯಗಳನ್ನೂ ಸಹ ವಿರ್ಮಶಿಸುವ ಅಧಿಕಾರ ಆ ಸಭೆಗೆ ಇದ್ದಿತು. 1. ಗ್ರಾಮ ನಿರ್ಮಲೀಕರಣ 2. ವೈದ್ಯ ಸಹಾಯ 3. ವಿದ್ಯಾ ಪ್ರಚಾರ 4. ನೀರಿನ ಸೌಕರ್ಯ 5. ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು. ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರು. ನಾಡಿನಲ್ಲೇ ಮೊಟ್ಟಮೊದಲ ವಿಶ್ವವಿದ್ಯಾನಿಲಯವಾದ ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರು. ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್, ಮೈಸೂರು ಬ್ಯಾಂಕಿನ ಸ್ಥಾಪನೆ ಮಾಡಲಾಯಿತು. ಉಚಿತ ಆಸ್ಪತ್ರೆಗಳು ಕಾರ್ಯಾರಂಭ ಮಾಡಿದವು. 1906ರಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸಲಾಯಿತು. ರೈಲು ಯೋಜನೆಗಳನ್ನು ಜಾರಿಗೆ ತಂದರು.

ಅಲ್ಲದೆ ಒಡೆಯರ ಕಾಲದಲ್ಲಿ ಶಿವನಸಮುದ್ರ ಜಲವಿದ್ಯುತ್ ಯೋಜನೆ, ವಾಣಿ ವಿಲಾಸ ಸಾಗರ ಆಣೆಕಟ್ಟು ಮತ್ತು ಕನ್ನಾಂಬಾಡಿಯಲ್ಲಿ ಕೃಷ್ಣರಾಜ ಸಾಗರ ಆಣೆಕಟ್ಟು ನಿರ್ಮಾಣ ಮಾಡಿದ್ದರಿಂದ ವಿದ್ಯುತ್ ಮತ್ತು ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು. ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವನ್ನು ಉಚಿತ ಮತ್ತು ಕಡ್ಡಾಯವಾಗಿ ಪ್ರಾರಂಭಿಸಲಾಯಿತು. ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ರೂಪಿಸಿದರು. ಇವರ ಕಾಲದಲ್ಲಿ ಇಡೀ ಭರತ ಖಂಡದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಮೈಸೂರು ರಾಜ್ಯವು ಕಂಡುದರಿಂದ, ಮೈಸೂರು ಸಂಸ್ಥಾನವು **'ಮಾದರಿ ಮೈಸೂರು ರಾಜ್ಯ'** ಎಂಬ ಕೀರ್ತಿಗೆ ಪ್ರಾಪ್ತವಾಯಿತು.

**ಅಥವಾ**

**ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.**

**ಉತ್ತರ :** ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ನೇಮಿಸಿದರು. ದಿವಾನರಾದ ನಂತರ ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕಚೇರಿಯ ಕೆಲಸ ಕಾರ್ಯಗಳಲ್ಲಿ ಸುಧಾರಣೆ ತಂದರು. ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು. ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು. ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು. 1913ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು. ಮೈಸೂರು ಸಂಸ್ಥಾನವೇ ಪ್ರತ್ಯೇಕವಾದ ಪ್ರೌಢಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ರೂಪುಗೊಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಇವರ ಕಾಲದಲ್ಲಾಯಿತು. ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್ ಕಾಲೇಜು, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು.

'ಕನ್ನಡ ಸಾಹಿತ್ಯ ಪರಿಷತ್ತನ್ನು' ಸ್ಥಾಪಿಸಿದ್ದು ಇವರ ಕಾಲದ ಮತ್ತೊಂದು ಮಹತ್ವದ ಸಾಧನೆಯಾಗಿದೆ. ವಿಶ್ವೇಶ್ವರಯ್ಯ ಅವರು ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದ್ದರು. "ಕೈಗಾರಿಕೀಕರಣ ಇಲ್ಲವೆ ಅವನತಿ" ಎಂಬ ಘೋಷಣೆ ಮಾಡಿದರು. ಇವರ ಕಾಲದಲ್ಲಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು ಸ್ಥಾಪಿತವಾಯಿತು. ಇದಲ್ಲದೆ ಹೆಂಚಿನ ಕಾರ್ಖಾನೆ, ಮೊಳೆ ಮತ್ತು ಗೊಬ್ಬರ ತಯಾರಿಕಾ ಸ್ಥಾವರ, ಸಕ್ಕರೆ ಕಾರ್ಖಾನೆ, ಔಷಧ ತಯಾರಿಕಾ ಘಟಕ, ಗಂಧದ ಎಣ್ಣೆ, ಬೆಂಕಿಕಡ್ಡಿ ಹಾಗೂ ಕಾಗದದ ಕಾರ್ಖಾನೆಗಳು

ಸ್ಥಾಪಿತವಾದವು. ಸೋಪು ಹಾಗೂ ಲೋಹ ತಯಾರಿಕೆ, ಕಲೆ ಮತ್ತು ಕರಕುಶಲ ಡಿಪೋ, ಕೃಷ್ಣರಾಜೇಂದ್ರ ಬಟ್ಟೆ ಗಿರಣಿ, ಕಾಗದದ ತಿರುಳು, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ಮತ್ತು ಪೀಠೋಪಕರಣಗಳ ತಯಾರಿಕಾ ಘಟಕಗಳು – ಹೀಗೆ ನೂರಾರು ಕೈಗಾರಿಕೆಗಳು ಪ್ರಾರಂಭಗೊಂಡವು.

1913ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳನ್ನು ಸ್ಥಾಪಿಸಿದರು. ಸಾರ್ವಜನಿಕ ಜೀವವಿಮಾ ಯೋಜನೆ ಜಾರಿಗೆ ತಂದರು. ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ, ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು.

**42. ಪಾಂಡವರನ್ನು ರಕ್ಷಿಸಬೇಕೆಂದು ನಿರ್ಧರಿಸಿದ ಶ್ರೀಕೃಷ್ಣನು ಕರ್ಣನಿಗೆ ಒಡ್ಡಿದ ಆಮಿಷಗಳನ್ನು ಸಂಗ್ರಹಿಸಿ ಬರೆಯಿರಿ.**

**ಉತ್ತರ :** ಪಾಂಡವರನ್ನು ರಕ್ಷಿಸಬೇಕೆಂದು ನಿರ್ಧರಿಸಿದ ಶ್ರೀಕೃಷ್ಣನು ಕರ್ಣನ ಬಳಿ ಬಂದು "ಕರ್ಣ ನಿಮ್ಮೊಳಗೆ (ಪಾಂಡವರು) ಯಾದವರೊಳಗೆ, ಕೌರವರೊಳಗೆ ಯಾವುದೇ ಭೇದ ಇಲ್ಲ. ನಿನ್ನಾಣೆಗೂ ನೀನು ಈ ಭೂಮಿಯ ಒಡೆಯ, ನಿನ್ನ ಮನಸ್ಸಿನಲ್ಲಿ ಇದರ ಅರಿವು ಯಾವುದು ಇಲ್ಲ. ಕುಂತಿಪುತ್ರರಲ್ಲಿ ಮೊದಲಿಗ ನೀನು, ಅನಂತರ ಪಾಂಡುಪುತ್ರರು, ನ್ಯಾಯಯುತವಾಗಿ ನೀನು ರಾಜನಾಗಬೇಕಾದವನು. ನಿನಗೆ ಹಸ್ತಿನಾಪುರದ ರಾಜ ಪದವಿಯನ್ನು ಕೊಡಿಸುತ್ತೇನೆ. ಪಾಂಡವರು, ಕೌರವರು ನಿನ್ನ ರಾಜ ಪದವಿಯನ್ನು ಒಪ್ಪಿಕೊಳ್ಳುತ್ತಾರೆ. ಎರಡು ವಂಶದವರು ನಿನ್ನ ಸೇವೆಯನ್ನು ಮಾಡುತ್ತಾರೆ. ಕೌರವನೆದರು ಕೈಯೊಡ್ಡಿ ನಿಲ್ಲುವುದು ಸರಿಯಲ್ಲ. ಎಡಕ್ಕೆ ಕೌರವರು, ಬಲಕ್ಕೆ ಪಾಂಡವರು, ಎದುರಿಗೆ ಮಾದ್ರ, ಮಾಗಾಧಿ–ಯಾದವರು ಇರುತ್ತಾರೆ. ನೀನು ಸಿಂಹಾಸನದಲ್ಲಿ ಕುಳಿತು ರಾಜಸಭೆಯನ್ನು ಮಾಡಬಹುದು. ದುರ್ಯೋಧನನು ಹೇಳಿದಂತೆ ಜೀಯಾ, ಹಸಾದ ಎನ್ನುವುದು ಕಷ್ಟವಲ್ಲವೆ ಎಂದು ಆಮಿಷಗಳನ್ನು ಒಡ್ಡಿದನು.

**ಅಥವಾ**

**ಪಾಂಡವರು ಸಹೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಉತ್ತರ :** ಪಾಂಡವರು ಸಹೋದರರೆಂದು ತಿಳಿದಾಗ ಕರ್ಣನ ಕೊರಳ ನರಗಳು ಬಿಗಿದವು. ಕಣ್ಣೀರು ಹೆಚ್ಚಾಗಿ ಅತಿಯಾಗಿ ನೊಂದುಕೊಂಡನು. ಮನದೊಳಗೆ ಕೌರವನಿಗೆ ಕೇಡಾಯಿತು ಎಂದುಕೊಂಡನು. ಹರಿಯು ತನ್ನ ದ್ವೇಷವನ್ನು ಹೊರಗೆ ತೋರಿಸದೆ ಸೇಡು ತೀರಿಸಿಕೊಳ್ಳುತ್ತಿದ್ದಾನಲ್ಲ ಎಂದು ಅಳುಕಿದನು. ನನ್ನ ವಂಶವನ್ನು ತಿಳಿಸಿ ನನ್ನನ್ನು ಕೊಂದು ಹಾಕಿದನಲ್ಲ, ಮುಂದೇನು ಮಾತನಾಡುವುದು ಎಂದು ಚಿಂತಿಸಿದನು. ಈ ರಾಜ್ಯದ ಭೂಮಿಯ ಸಿರಿಗೆ ಸೋಲುವವನಲ್ಲ. ಕುಂತಿಯ ಪುತ್ರರು ಮತ್ತು ದುರ್ಯೋಧನರಿಂದ ಎನಗೆ ಸೇವೆ ಮಾಡಿಸಿಕೊಳ್ಳುವುದರಲ್ಲಿ ಮನಸ್ಸಿಲ್ಲ. ನನ್ನನ್ನು ಕಾಪಾಡಿದ ಒಡೆಯನಿಗೆ ಶತ್ರುಗಳ ಶಿರವನ್ನು ಕತ್ತರಿಸಿ ಒಪ್ಪಿಸುವೆನು ಎಂಬ ಭರದಲ್ಲಿ ಇದ್ದೆನು ಆದರೆ ಈ ಕೃಷ್ಣ ನನ್ನ ವಂಶಮೂಲವನ್ನು ತಿಳಿಸಿ ಕೌರವೇಂದ್ರನನ್ನು ಕೊಂದನಲ್ಲ. ವೀರ ಕೌರವರಾಯನೇ ನನಗೆ ಒಡೆಯ, ದುರ್ಯೋಧನ ಆದಂತೆ ನಾನು ಆಗುವೆನು. ನಾಳಿನ ಸಮರದಲ್ಲಿ ಪಾಂಡುವಿನ ಪುತ್ರರಲ್ಲಿ ನನ್ನ ಭುಜಭಲದ ಪರಾಕ್ರಮವನ್ನು ತೋರಿಸುತ್ತೇನೆ. ಚತುರಂಗ ಬಲದಿಂದ ಕೂಡಿದ ನಾಳಿನ ಮಹಾಭಾರತ ಯುದ್ಧದಲ್ಲಿ ಮೃತ್ಯುದೇವತೆಗೆ ಭೋಜನ ಕೂಟ ಏರ್ಪಡಿಸುತ್ತೇನೆ. ಯುದ್ಧರಂಗದಲ್ಲಿ ಅಸಂಖ್ಯಾ ವೀರಯೋಧರನ್ನು ಕೊಂದು ಕೌರವನ ಋಣ ತೀರುವಂತೆ ಮಾಡುತ್ತೇನೆ. ಸೂರ್ಯನ ಮೇಲಾಣೆ ಆ ವೀರರೌವರನು(ಪಾಂಡವರು) ನೋಯಿಸುವುದಿಲ್ಲ ಎಂಬ ಮನಸ್ಥಿತಿ ಉಂಟಾಯಿತು.

**XII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**43. ಪ್ರಶ್ನೆಗಳು :** 1 X 4 = 4 ( 2 + 2)

**ಅ) ಅಂತರ್ಜಲಮಟ್ಟ ಹೇಗೆ ಹೆಚ್ಚುತ್ತದೆ ?**

**ಉತ್ತರ :** ನಮ್ಮ ಮಣ್ಣು ಒಂದು ಸ್ಪಂಜಿನಂತೆ. ಮಳೆಗಾಲದಲ್ಲಿ ಬಿದ್ದ ಮಳೆಯೆಲ್ಲಾ ಭೂಮಿಯ ಮೇಲಿನಿಂದಲೇ ಹರಿದೋಡುತ್ತದೆ. ಅದನ್ನು ನಾವು ಬೇರೆ ಬೇರೆ ಕ್ರಮದಿಂದ ಮಣ್ಣಿನೊಳಕ್ಕೆ ಇಳಿಸಿಬಿಟ್ಟರೆ ಈ ಸ್ಪಂಜು ಒದ್ದೆಯಾಗುತ್ತದೆ. ಅದು ನಿಧಾನವಾಗಿ ತಾನು ಹೀರಿಕೊಂಡದ್ದರ ಸ್ವಲ್ಪಾಂಶ ನೀರನ್ನು ಬಿಟ್ಟು ಕೊಡುತ್ತದೆ. ಹೀಗೆ ಬಿಟ್ಟು ಕೊಟ್ಟ ನೀರು ಅಂತರ್ಜಲಮಟ್ಟವನ್ನು ಹೆಚ್ಚಿಸುತ್ತದೆ.

**ಬ) ಮಳೆಗಾಲದಲ್ಲಿ ಭೂಮಿಯ ಒಡಲು ಏಕೆ ತುಂಬುವುದಿಲ್ಲ ?**

**ಉತ್ತರ :** ಭೂಮಿ ಒಂದು ಜಲಪಾತ್ರೆ ಮಾತ್ರ. ಅದುವೇ ನೀರಿನ ಮೂಲ ಅಲ್ಲ. ಬಿದ್ದ ಮಳೆ ನೀರು ಪಾತ್ರೆಯಲ್ಲಿ ಚೆನ್ನಾಗಿ ತುಂಬಿದರೆ ಮುಂದಿನ ಬೇಸಿಗೆಗೂ ತೊಂದರೆ ಇರದು. ಹೀಗಾಗಬೇಕಾದರೆ ಮಳೆಯನ್ನು ತಡೆಯುವ ತಡೆಗಳು ಬೇಕು. ಕಾಡು ಒಂದು ಅತ್ಯುತ್ತಮ ನೈಸರ್ಗಿಕ ಬಹುಹಂತಗಳ ತಡೆ. ಕಾಡೇ ನದಿಗಳ ತಾಯಿ. ಇಂತಹ ಪ್ರಾಕೃತಿಕ ಮತ್ತು ಪೂರ್ವಜರು ಮಾಡಿಟ್ಟ ಕೆರೆ, ಮದಕ, ಒಡ್ಡುಗಳಂತಹ ತಡೆಗಳನ್ನು ನಾಶಗೊಳಿಸಿದ ಕಾರಣ ಮಳೆಗಾಲದಲ್ಲಿ ಭೂಮಿಯ ಒಡಲು ತುಂಬುವುದಿಲ್ಲ.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ:** 1 X 5=5

44. ನಿಮ್ಮನ್ನು ಉಡುಪಿಯ ಸರ್ಕಾರಿ ಪ್ರೌಢಶಾಲೆಯ 'ಅವಿನಾಶ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ 'ಮಳೆಕೊಯ್ಲು ತೊಟ್ಟಿ' ನಿರ್ಮಿಸುವಂತೆ ಕೋರಿ ನಗರಸಭೆ ಆಯುಕ್ತರಿಗೆ ಪತ್ರವನ್ನು ಬರೆಯಿರಿ.

ಇಂದ

ಅವಿನಾಶ
10ನೇ ತರಗತಿ
ಸರ್ಕಾರಿ ಪ್ರೌಢಶಾಲೆ, ಉಡುಪಿ

ಇವರಿಗೆ

ಆಯುಕ್ತರು
ನಗರಸಭೆ
ಉಡುಪಿ–583132

ಮಾನ್ಯರೇ,

**ವಿಷಯ:** 'ಮಳೆಕೊಯ್ಲು ತೊಟ್ಟಿ' ನಿರ್ಮಿಸುವಂತೆ ಕೋರಿ

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಇತ್ತೀಚಿನ ದಿನಗಳಲ್ಲಿ ನೀರಿನ ಅಭಾವ ಬಾರಿ ಕಾಡುತ್ತಿದೆ. ನಮ್ಮ ಶಾಲೆಗೂ ಇದರ ಬಿಸಿ ತಟ್ಟಿದೆ. ನಮ್ಮ ಶಾಲೆಯಲ್ಲಿ ನೀರಿನ ಕೊರತೆಯಿಂದ ಮರಗಿಡಗಳೆಲ್ಲ ಒಣಗಿ ಹೋಗುತ್ತಿವೆ. ಕುಡಿಯಲು, ಬಿಸಿಯೂಟ ತಯಾರಿಸಲು ಮತ್ತು ಶೌಚಾಲಯ ಬಳಕೆಗೆ ನೀರು ಸಾಕಾಗುತ್ತಿಲ್ಲ.

ಅಲ್ಲದೆ ನೀರನ್ನು ಸಂಗ್ರಹ ಮಾಡಲು ಯಾವುದೇ ವ್ಯವಸ್ಥೆ ಇರುವುದಿಲ್ಲ. ಶಾಲೆಯ ಮೇಲ್ಛಾವಣಿಯಿಂದ ಬಿದ್ದ ನೀರು ಚರಂಡಿಗೆ ಹರಿದು ಹೋಗುತ್ತಿದೆ. ಆದ್ದರಿಂದ ನಮ್ಮ ಶಾಲೆಯಲ್ಲಿ ಮಳೆಕೊಯ್ಲು ತೊಟ್ಟಿ ನಿರ್ಮಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ

ದಿನಾಂಕ – 25.02.2025 ತಮ್ಮ ವಿಶ್ವಾಸಿ
ಸ್ಥಳ : ಉಡುಪಿ ಅವಿನಾಶ

**ಅಥವಾ**

ನಿಮ್ಮನ್ನು ಮಂಗಳೂರಿನ ಸರ್ಕಾರಿ ಪ್ರೌಢಶಾಲೆಯ 'ನೇಹ' ಎಂದು ಭಾವಿಸಿಕೊಂಡು, ಶಾಲಾವಾರ್ಷಿಕೋತ್ಸವಕ್ಕೆ ಆಹ್ವಾನಿಸಿ ಹುಬ್ಬಳ್ಳಿಯಲ್ಲಿ ವಾಸವಾಗಿರುವ 'ಜ್ಯೋತಿ' ಎಂಬ ಹೆಸರಿನ ತಾಯಿಗೆ ಪತ್ರವನ್ನು ಬರೆಯಿರಿ.

ನೇಹ
10ನೇ ತರಗತಿ
ಸರ್ಕಾರಿ ಪ್ರೌಢಶಾಲೆ
ಮಂಗಳೂರು
ದಿನಾಂಕ : 25.02.2025

ಪೂಜ್ಯ ಮಾತೃಶ್ರೀಯವರಿಗೆ ನಿಮ್ಮ ಮಗಳು ನೇಹ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು

ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ನೀನು ಆರೋಗ್ಯವಾಗಿದ್ದೀಯಾ ಎಂದು ಭಾವಿಸುತ್ತೇನೆ. ನನ್ನ ವಿದ್ಯಾಭ್ಯಾಸ ಚೆನ್ನಾಗಿ ನಡೆಯುತ್ತಿದೆ. ನಮ್ಮ ಶಾಲೆಯಲ್ಲಿ ದಿನಾಂಕ 30.02.2025ರಂದು ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯುತ್ತದೆ. ಈ ಉತ್ಸವದಲ್ಲಿ ನಾಟಕ, ಹಾಡು, ನೃತ್ಯ, ಹಾಸ್ಯ ಮುಂತಾದ ಕಾರ್ಯಕ್ರಮಗಳು ನಡೆಯುತ್ತವೆ. ಅದರಲ್ಲಿ ನಾನು ಭರತನಾಟ್ಯವನ್ನು ಮಾಡುತ್ತಿದ್ದೇನೆ. ಆದ್ದರಿಂದ ಈ ಕಾರ್ಯಕ್ರಮಕ್ಕೆ ನೀನು ಮತ್ತು ಅಪ್ಪ, ತಂಗಿ ಎಲ್ಲರು ಬರಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರಣಾಮಗಳೊಂದಿಗೆ

ಇಂತು ನಿಮ್ಮ ಪ್ರೀತಿಯ ಮಗಳು
ನೇಹ

**ಅಂಚೆ ವಿಳಾಸ**

ಜ್ಯೋತಿ
ವಿವೇಕಾನಂದ ನಗರ
ಹುಬ್ಬಳ್ಳಿ – 583131

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** 1 X 5 = 5

**45. ಸಾಮಾಜಿಕ ಪಿಡುಗುಗಳು**

**ಪೀಠಿಕೆ** : ಸಮಾಜದ ಅಭಿವೃದ್ಧಿಗೆ ತೊಡಕನ್ನುಂಟುಮಾಡುವ ಕೆಲವು ಪದ್ಧತಿಗಳನ್ನು ಸಾಮಾಜಿಕ ಪಿಡುಗುಗಳು ಎಂದು ಗುರುತಿಸಲಾಗಿದೆ. ಇಂತಹ ಪದ್ಧತಿಗಳು ನಮ್ಮ ದೇಶವನ್ನು ಅಭಿವೃದ್ಧಿಪಥದತ್ತ ಕೊಂಡೊಯ್ಯಲು ಕಂಟಕವಾಗಿವೆ. ಇವುಗಳನ್ನು ನಿವಾರಿಸಿಕೊಂಡಾಗ ಮಾತ್ರ ಸಮಾಜ ಸ್ವಾಸ್ಥ್ಯವಾಗಿರಬಲ್ಲದು.

**ವಿಷಯ ನಿರೂಪಣೆ:** ಪಾಚೀನ ಕಾಲದಿಂದಲೂ ನಮ್ಮ ಸಮಾಜಕ್ಕೆ ಅಂಟಿಕೊಂಡು ಬಂದಿರುವ, ಸಮಾಜದ ಅಭಿವೃದ್ಧಿಗೆ ಕಂಟಕವಾಗಿರುವ ಬಡತನ, ಅನಕ್ಷರತೆ, ಬಾಲ್ಯವಿವಾಹ, ವರದಕ್ಷಿಣೆ, ಸ್ತ್ರೀಶೋಷಣೆ, ಭಿಕ್ಷಾಟನೆ, ಜಾತೀಯತೆ, ಅಸ್ಪೃಷ್ಯತೆ, ಸತಿಪದ್ಧತಿ, ದೇವದಾಸಿ ಪದ್ಧತಿ, ಜೀತಪದ್ಧತಿ, ಪರದಾ ಪದ್ಧತಿಯಂತಹ ಸಾಮಾಜಿಕ ಪಿಡುಗುಗಳು ನಮ್ಮನ್ನು ಇಂದಿಗೂ ಕಾಡುತ್ತಿವೆ. ಇಂತಹ ಅನಿಷ್ಟಗಳನ್ನು ಹೋಗಲಾಡಿಸಿದಾಗ ಮಾತ್ರ ನಮ್ಮ ಸಮಾಜದ ಏಳಿಗೆಯಾಗಲು ಸಾಧ್ಯವಿದೆ. ಇಲ್ಲವಾದರೆ ಸಮಾಜ ಅಭಿವೃದ್ಧಿ ಕುಂಠಿತಗೊಂಡು ದಾಸ್ಯದಲ್ಲಿರಬೇಕಾಗುತ್ತದೆ. ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲು ಸಾಕಷ್ಟು ಕಾನೂನುಗಳಿದ್ದರೂ ಪ್ರಯೋಜನವಾಗಿಲ್ಲ. ಇವುಗಳು ಹೀಗೆ ಮುಂದುವರಿದಿರಲು ಅನಕ್ಷರತೆಯೆ ಕಾರಣ ಎಂದು ಹೇಳಬಹುದು. ಅಕ್ಷರಸ್ಥರ ಸಂಖ್ಯೆ ಹೆಚ್ಚಿದಂತೆ ಕೆಲವು ಪಿಡುಗುಗಳು ದೂರವಾಗುತ್ತಿವೆ. ಅನಕ್ಷರತೆ ಎಲ್ಲಿ ತಾಂಡವವಾಡುತ್ತಿದಿಯೋ ಅಲ್ಲಿ ಇಂತಹ ಪಿಡುಗುಗಳು ಜೀವಂತವಾಗಿವೆ. ಸಾಮಾಜಿಕ ಪಿಡುಗುಗಳು ಸಮಾಜಕ್ಕೆ ಹಿಡಿದ ಗೆದ್ದಲಿನಂತೆ ಸಮಾಜವನ್ನು ವಿನಾಶದತ್ತ ಕೊಂಡೊಯ್ಯತ್ತವೆ. ಆದ್ದರಿಂದ ನಮ್ಮ ಸರ್ಕಾರಗಳು ಇನ್ನೂ ಕಠಿಣ ಕಾನೂನುಗಳನ್ನು ಜಾರಿಗೆ ತಂದು, ಅದಕ್ಕೆ ಪೂರಕವಾದ ಅರಿವು ಮೂಡಿಸಬೇಕು. ಪ್ರತಿಯೊಬ್ಬರಲ್ಲಿ ವೈಜ್ಞಾನಿಕ ಮನೋಭಾವವನ್ನು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಸಾಮಾಜಿಕ ಪಿಡುಗುಗಳಿಂದ ಆಗುವ ಅನಾಹುತಗಳನ್ನು ತಿಳಿಸಬೇಕು. ಅಂದಾಗ ಮಾತ್ರ ನಿವಾರಣೆಯಾಗಬಲ್ಲವು.

**ಉಪಸಂಹಾರ** : ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಮಾಜಿಕ ಪಿಡುಗುಗಳನ್ನು ಬೇರುಸಹಿತ ಕಿತ್ತೊಗೆಯಬೇಕು. ವಿದ್ಯಾವಂತರು ಮುಂದೆ ಬಂದು ಅನಕ್ಷರಸ್ಥರಲ್ಲಿ ಅರಿವು ಮೂಡಿಸಿ ಆ ಮೂಲಕ ಸಾಮಾಜಿಕ ಪಿಡುಗುಗಳನ್ನು ನಿವಾರಿಸಿ ಸಮಾಜ ಸ್ವಾಸ್ಥ್ಯವಾಗಿರಿಸಲು ಶ್ರಮಿಸಬೇಕು. ಆಗ ಮಾತ್ರ ನಮ್ಮ ದೇಶ ಅಭಿವೃದ್ಧಿಪಥದತ್ತ ಸಾಗಲು ಸಾಧ್ಯವೆಂದು ಹೇಳಬಹುದು.

**ಅಥವಾ**

**ಶಾಲಾ ಸಂಸತ್ತಿನ ಕಾರ್ಯಚಟುವಟಿಕೆಗಳು**

**ಪೀಠಿಕೆ : '**ಇಂದಿನ ಮಕ್ಕಳೇ ನಾಳಿನ ಪ್ರಜೆಗಳು'– ಪ್ರಜೆಗಳೇ ಪ್ರಭುಗಳಾಗುವ ವ್ಯವಸ್ಥೆಯನ್ನು ಬಲಗೊಳಿಸುವ ನಿಟ್ಟಿನಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುವ ನಿಟ್ಟಿನಲ್ಲಿ, ಸಂಸದೀಯ ವ್ಯವಸ್ಥೆಯ ಬಗೆಗೆ ಅರಿವು ಮೂಡಿಸುವಲ್ಲಿ ಶಾಲಾ ಸಂಸತ್ತು ಬಹಳ ಮುಖ್ಯವಾದದ್ದು. ಭಾರತ ದೇಶದ ಆಡಳಿತ ವ್ಯವಸ್ಥೆ ಸಂಸತ್‌ನಿಂದ ನಡೆಯುತ್ತದೆ. ಅದೇ ಮಾದರಿಯಂತೆ ಶಾಲಾ ಕಾಲೇಜುಗಳಲ್ಲಿ ಶಾಲಾ ಸಂಸತ್ತನ್ನು ರಚನೆ ಮಾಡಿ ಸಂಸತ್ತಿನ ಕಾರ್ಯಕಲಾಪಗಳಂತೆ ಕಾರ್ಯಕ್ರಮಗಳನ್ನು ನಡೆಸಿ ವಿದ್ಯಾರ್ಥಿಗಳಲ್ಲಿ ತಿಳಿವಳಿಕೆ ಮೂಡಿಸಲಾಗುತ್ತದೆ.

**ವಿಷಯ ನಿರೂಪಣೆ :** ಪ್ರಜಾಪ್ರಭುತ್ವದ ತತ್ತ್ವಗಳನ್ನು, ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ನಿಟ್ಟಿನಲ್ಲಿ ಶಾಲಾ ಸಂಸತ್ತು ಮಹತ್ತ್ವದ ಪಾತ್ರ ವಹಿಸುತ್ತದೆ. ಚುನಾವಣಾ ಪ್ರಕ್ರಿಯೆ ನಡೆಯುವಂತೆ ಶಾಲೆಗಳಲ್ಲಿಯೂ ವಿದ್ಯಾರ್ಥಿ ಅಭ್ಯರ್ಥಿಗಳನ್ನು ಚುನಾವಣೆಗೆ ನಿಲ್ಲಿಸುವುದು, ವಿದ್ಯಾರ್ಥಿಗಳಿಂದ ಮತದಾನ ಮಾಡಿಸುವುದು, ಎಣಿಕೆ ಪ್ರಕ್ರಿಯೆ, ಫಲಿತಾಂಶ ಘೋಷಣೆ ಈ ರೀತಿಯಾಗಿ ಪ್ರಕ್ರಿಯೆಗಳನ್ನು ಮಾಡುವುದರಿಂದ ವಿದ್ಯಾರ್ಥಿಗಳಲ್ಲಿ ಮತದಾನದ ಅರಿವು, ಮಹತ್ತ್ವ ಮತ್ತು ದೇಶದ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಮಹತ್ತ್ವ ಗೊತ್ತಾಗುತ್ತದೆ. ದೇಶದ ಸಂಸತ್ತಿನಲ್ಲಿ ಸಂಸದರು ಇರುವಂತೆ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಚುನಾವಣೆಯ ಮಾದರಿಯಂತೆ ಚುನಾಯಿಸಿ ವಿವಿಧ ಜವಾಬ್ದಾರಿಗಳನ್ನು ಹಂಚಿಕೆ ಮಾಡಲಾಗುತ್ತದೆ. ಶಿಸ್ತು ಕಾಪಾಡುವುದು, ಶಾಲಾ ಸ್ವಚ್ಛತೆ ನಿರ್ವಹಣೆ, ಗ್ರಂಥಾಲಯ ನಿರ್ವಹಣೆ ಮುಂತಾದ ಕಾರ್ಯಗಳನ್ನು ನೀಡಿ ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸಲಾಗುತ್ತದೆ.

**ಉಪಸಂಹಾರ** : ಸ್ಪರ್ಧಾತ್ಮಕ ಮನೋಭಾವನೆಯನ್ನು ಬೆಳೆಸಲು, ನಾಯಕತ್ತ್ವದ ಗುಣಗಳನ್ನು ರೂಢಿಸಲು ಸಹಕಾರಿಯಾಗುವುದು. ಆಡಳಿತದ ವೈಖರಿಯನ್ನು ಅರಿಯಲು ಜವಾಬ್ದಾರಿಗಳನ್ನು ಅರಿಯಲು ಅಣಕು ಸಂಸತ್ತು ಮಾಡುವುದರ ಮೂಲಕ ವಿದ್ಯಾರ್ಥಿಗಳ ಅರಿವು ಮೂಡಿಸಲು ಸಹಕಾರಿಯಾಗುತ್ತದೆ.

## ಶುಭವಾಗಲಿ